







# ಸೌಲಭ್ಯಕ್ಕಾಗಿ ಬಿಎಸ್‌ಎನ್‌ಎಲ್ ನೌಕರರಿಂದ ಪ್ರತಿಭಟನೆ

First Published: 13 Feb 2013 02:00:00 AM IST

ಬೆಂಗಳೂರು: ವಿವಿಧ ಬೇಡಿಕೆಗಳ ಈಡೇರಿಕೆಗೆ ಆಗ್ರಹಿಸಿ ಬಿಎಸ್‌ಎನ್‌ಎಲ್ ನೌಕರರು ನಗರದಲ್ಲಿ ಭೋಜನ ವಿರಾಮ ಪ್ರತಿಭಟನೆನಡೆಸಿದರು.

ತುಟ್ಟಿಭತ್ಯೆ ಹಾಗೂ ನೌಕರರ ಸೌಲಭ್ಯಗಳನ್ನು ಸೂಕ್ತ ರೀತಿಯಲ್ಲಿ ಒದಗಿಸಬೇಕೆಂದು ಆಗ್ರಹಿಸಿ ಆಲ್ ಇಂಡಿಯಾ ಬಿಎಸ್‌ಎನ್‌ಎಲ್ ಎಕ್ಸಿಕ್ಯುಟಿವ್ ಅಸೋಸಿಯೇಷನ್ ಕರೆ ನೀಡಿದ್ದ ಹಿನ್ನೆಲೆಯಲ್ಲಿ ನೌಕರರು ಬೆಂಗಳೂರು ವೃತ್ತ ಕಚೇರಿ ಮುಂದೆ ಪ್ರತಿಭಟನೆ ನಡೆಸಿದರು.

ಆಲ್ ಇಂಡಿಯಾ ಬಿಎಸ್‌ಎನ್‌ಎಲ್ ಎಕ್ಸಿಕ್ಯುಟಿವ್ ಅಸೋಸಿಯೇಷನ್ ಜಿಲ್ಲಾ ಕಾರ್ಯದರ್ಶಿ ಶಶಿಧರ್ ಕೆ. ಹಿರೇಮಠ ನೇತೃತ್ವದಲ್ಲಿ 200ಕ್ಕೂ ಹೆಚ್ಚಿನ ನೌಕರರು 1ಗಂಟೆಗೂ ಹೆಚ್ಚು ಕಾಲ ಪ್ರತಿಭಟಿಸಿದರು. ಕೈಗಾರಿಕಾ ತುಟ್ಟಿಭತ್ಯೆ ಎಂಬ ಸೌಲಭ್ಯ ನೀಡುವ ಸಂಬಂಧ ಬಿಎಸ್‌ಎನ್‌ಎಲ್ ಕಾರ್ಪೊರೇಟ್ ಕಚೇರಿ ಮತ್ತು ಎಕ್ಸಿಕ್ಯುಟಿವ್ ಅಸೋಸಿಯೇಷನ್ ನಡುವೆ ಒಪ್ಪಂದವಾಗಿತ್ತು. ಆದರೆ, ಬಿಎಸ್‌ಎನ್‌ಎಲ್ ಕಾರ್ಪೊರೇಟ್ ಕಚೇರಿ ತುಟ್ಟಿಭತ್ಯೆ ನೀಡದೆ ನೌಕರರ ವಿರೋಧಿ ನೀತಿ ಪ್ರದರ್ಶಿಸುತ್ತಿದೆ ಎಂದು ನೌಕರರು ದೂರಿದರು.

ಬಿಎಸ್‌ಎನ್‌ಎಲ್ ಕಾರ್ಪೊರೇಟ್ ಕಚೇರಿ ವಿಳಂಬ ನೀತಿ ವಿರುದ್ಧ ಘೋಷಣೆ ಕೂಗಿದರು. ಈ ಸಂದರ್ಭದಲ್ಲಿ ಮಾತನಾಡಿದ ಅಸೋಸಿಯೇಷನ್ ಜಿಲ್ಲಾ ಕಾರ್ಯದರ್ಶಿ ಶಶಿಧರ್ ಕೆ. ಹಿರೇಮಠ, ಬಿಎಸ್‌ಎನ್‌ಎಲ್ ಕಾರ್ಪೊರೇಟ್ ಕಚೇರಿ ತುಟ್ಟಿ ಭತ್ಯೆ ನೀಡುವ ವಿಚಾರದಲ್ಲಿ ಈ ರೀತಿ ವಿಳಂಬ ಮಾಡುವುದು ಸರಿಯಲ್ಲ ಎಂದು ಖಂಡಿಸಿದರು.

ಕೇಂದ್ರ ಕಚೇರಿಯ ವಿಳಂಬ ಧೋರಣೆ ಇದೇರೀತಿ ಮುಂದುವರಿದರೆ, ಫೆ.15ರಂದು ಹಲಸೂರಿನಲ್ಲಿರುವ ರಾಜ್ಯ ವೃತ್ತ ಕಚೇರಿಯಲ್ಲಿ ಒಂದು ದಿನದ ಧರಣಿ ಸತ್ಯಾಗ್ರಹ ನಡೆಸಲಾಗುವುದು ಎಂದು ಹಿರೇಮಠ ಎಚ್ಚರಿಕೆ ನೀಡಿದರು. ನೌಕರರು ಗ್ರಾಹಕರಿಗೆ ಯಾವುದೇ ತೊಂದರೆಯಾಗದಂತೆ ಬಿಡುವಿನ ವೇಳೆಯಲ್ಲಿ ಮುಷ್ಕರ ನಡೆಸುತ್ತಿರುವುದರಿಂದ ಗ್ರಾಹಕರು ನೌಕರರ ಮುಷ್ಕರಕ್ಕೆ ಬೆಂಬಲ ಸೂಚಿಸಬೇಕೆಂದು ಅವರು ವಿನಂತಿಸಿದರು.

0

*Disclaimer: The views expressed in comments published on kannadaprabha.com are those of the comment writers alone. They do not represent the views or opinions of kannadaprabha.com or its staff, nor do they represent the views or opinions of The New Indian Express Group, or any entity of, or affiliated with, The New Indian Express Group. Comments are automatically posted live; however, kannadaprabha.com reserves the right to take any or all comments down at any time.*




ಇನ್ನಷ್ಟು...

- ಹೈಕೋರ್ಟ್ ಗುಡುಗಿಗೆ ನಡುಗಿದ ವೈದ್ಯರು
- ಮತ್ತೆ ಮೂವರು ಬಾಲಕಿಯರ ಮೇಲೆ ಅತ್ಯಾಚಾರ
- ಇಂದಿನಿಂದ ದ್ರಾಕ್ಷಿ, ಕಲ್ಲಂಗಡಿ ಹಬ್ಬ
- ಈ ಪ್ರೀತಿ ಪ್ರೇಮ ದುಬಾರಿ ಕಣ್ರೀ...
- ಕಳಂಕ ರಹಿತ ಆಡಳಿತ: ಕುಲಪತಿ ಪ್ರೊ. ತಿಮ್ಮೇಗೌಡ
- ನಮ್ಮದಾ ಈ ಮೆಟ್ರೋ..?
- ಇಂದಿನಿಂದ ಸಂಗೀತೋತ್ಸವ
- ನವೋದಯ ಶಿಕ್ಷಕರ ಮುಷ್ಕರ ವಿದ್ಯಾರ್ಥಿಗಳು ತತ್ತರ
- ಜಿಲ್ಲಾವಾರು ಹೋರಾಟ
- ಅಪ್ಪ ಅಂದ್ರೆ ಆಕಾಶ ಪುಸ್ತಕ 17ರಂದು ಬಿಡುಗಡೆ
- ಮೇಲ್ಸೇತುವೆಗೆ ಪ್ರವೇಶ ನಿರ್ಬಂಧ
- ಅತ್ಯಾಚಾರ ಯತ್ನ, ಬಾಲಕಿ ಕೊಲೆ
- ಬಿಎಂಟಿಸಿ ಬ್ರೇಕ್ ಫೇಲ್
- ಬೆಂಕಿ ಹಚ್ಚಿ ನವ ವಿವಾಹಿತೆ ಕೊಲೆ
- ಶಾಲಾ ವಾಹನ ಡಿಕ್ಕಿ; ಬಾಲಕ ಸಾವು